# ಮಾಧುರಿಗೆ ಏಕೆ ವಯಸ್ಸಾಗುತ್ತಿಲ್ಲ?



ಬಾಲಿವುಡ್‌ನ 'ಧಕ್ ಧಕ್' ಹುಡುಗಿ ಮಾಧುರಿಗೆ ಕ್ಯಾಲೆಂಡರ್ ಲೆಕ್ಕದಲ್ಲಿ ನೋಡಿದರೆ 51 ವರ್ಷ ದಾಟಿತು. ನೇರವಾಗಿ ಆಕೆಯನ್ನು ನೋಡಿದರೆ ಹಾಗೆ ಅನ್ನಿಸುವುದೇ ಇಲ್ಲ! ಏನಿದರ ಗುಟ್ಟು?

ಮೊನ್ನೆ 'ಟೋಟಲ್ ಧಮಾಲ್' ಪ್ರಮೋಷನ್ ಸಮಾರಂಭದಲ್ಲಿ ಭಾಗವಹಿಸಿದ್ದ ಮಾಧುರಿಯನ್ನು ನೋಡಿದವರೆಲ್ಲರೂ ಈ ಪ್ರಶ್ನೆಯನ್ನು ಮನಸಲ್ಲೇ ಕೇಳಿಕೊಂಡರು. ಈಗಲೂ ತೆಳ್ಳಗೆ ಬಳುಕುತ್ತಾ ಓಡಾಡುವ ಮಾಧುರಿ ಈ ಪ್ರಶ್ನೆಯನ್ನು ಹಲವೆಡೆ ಎದುರಿಸಿದ್ದಾಳೆ. ಹಾಗೆಂದೇ ತನ್ನ ವೆಬ್‌ಸೈಟ್‌ನಲ್ಲಿ ಆಹಾರದ ಬಗ್ಗೆ ಆಕೆ ಬರೆದುಕೊಂಡದ್ದು ಹೀಗೆ– 'ಗೋಡಂಬಿ, ಬಾದಾಮಿ, ಒಣದ್ರಾಕ್ಷಿ ಜೊತೆಗೆ ಸ್ವಲ್ಪ ತರಕಾರಿ. ಒಂದರ್ಧ ಹಣ್ಣು. ಜೊತೆಗೆ ಸಜ್ಜೆ ರೊಟ್ಟಿ ಅಥವಾ ಸ್ವಲ್ಪ ರೈಸ್. ಮಧ್ಯಾಹ್ನದ ಊಟಕ್ಕೆ ಒಂದು ಪೀಸ್ ಚಿಕನ್. ದೈಹಿಕ ಕೆಲಸ ಜಾಸ್ತಿ ಇದ್ದರೆ ಕಾರ್ಬೋಹೈಡ್ರೇಟ್ಸ್ ಸ್ವಲ್ಪ ಜಾಸ್ತಿಯೇ ಬೇಕು!'

'ಟೋಟಲ್ ಧಮಾಲ್' ಹೊಸ ಕಾಮಿಡಿ ಚಿತ್ರದಲ್ಲಿ ಅಜಯ್ ದೇವಗನ್, ಅನಿಲ್ ಕಪೂರ್, ಅರ್ಷದ್ ವಾರ್ಸಿ, ರಿತೇಶ್ ದೇಶ್‌ಮುಖ್ ಮುಂತಾಗಿ ನಾಯಕರ ದಂಡೇ ಇದೆ. ಎಲ್ಲರಿಗೂ ನಾಯಕಿ ಮಾಧುರಿ.

ಮಾಧುರಿಯನ್ನು ಮುಂದಿಟ್ಟುಕೊಂಡು ಸಿನಿಮಾ ಮಾಡಿದರೆ ಸೂಪರ್ ಸಕ್ಸಸ್ ಆಗುತ್ತದೆ ಎನ್ನುವುದನ್ನು ಸಾಬೀತುಪಡಿಸಿದ ನಿರ್ದೇಶಕ ಇಂದ್ರಕುಮಾರ್. 1990ರಲ್ಲಿ ಬಂದ 'ದಿಲ್', 92ರಲ್ಲಿ ಬಂದ 'ಬೇಟಾ' ಮತ್ತು 95ರಲ್ಲಿ ಬಂದ 'ರಾಜಾ' ಸಿನಿಮಾಗಳಲ್ಲಿ ಮಾಧುರಿಯೇ ಸೂಪರ್‌ಸ್ಟಾರ್. ಈಗ ಅದೇ ಇಂದ್ರಕುಮಾರ್ ನಿರ್ದೇಶನದ 'ಟೋಟಲ್ ಧಮಾಲ್' ತೆರೆಗೆ ಸಿದ್ಧವಾಗಿದೆ.

2002ರಲ್ಲಿ 'ದೇವದಾಸ್' ಚಿತ್ರದಲ್ಲಿ ನಟಿಸಿದ ಬಳಿಕ ಮದುವೆ, ಮಕ್ಕಳು, ಸಂಸಾರ ಎಂದು ಬೆಳ್ಳಿತೆರೆಯಿಂದ ದೂರವೇ ಉಳಿದಿದ್ದ ಮಾಧುರಿ, 2014ರಲ್ಲಿ 'ಗುಲಾಬ್ ಗ್ಯಾಂಗ್'ನಲ್ಲಿ ಮರಳಿದಳು. ಅದಾಗಿ ಈಗ ಐದು ವರ್ಷಗಳ ಬಳಿಕ ಮತ್ತೆ ಸಂಪೂರ್ಣ ಹಾಸ್ಯಮಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾಳೆ.

ಸಿನಿಮಾ ಇಲ್ಲವೆಂದು ಸುಮ್ಮನೆ ಕುಳಿತವಳಲ್ಲ ಮಾಧುರಿ. 'ಕಲರ್ಸ್' ಟಿವಿಯ ರಿಯಾಲಿಟಿ ಶೋ 'ಡ್ಯಾನ್ ದೀವಾನೆ'ಯಲ್ಲಿ ಜಡ್ಜ್ ಆಗಿ ಬ್ಯುಸಿ. ಈ ಮಧ್ಯೆ '15 ಆಗಸ್ಟ್' ಎಂಬ ಸಿನಿಮಾವೊಂದನ್ನೂ ನಿರ್ಮಿಸಿದ್ದಾಳೆ. ಮಾರ್ಚಿನಲ್ಲಿ ಈ ಸಿನಿಮಾ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಲಿದೆಯಂತೆ.

ಈ ಮಧ್ಯೆ 1990ರಲ್ಲಿ ತೆರೆ ಕಂಡ 'ದಿಲ್' ಸಿನಿಮಾವನ್ನು ಮತ್ತೆ ರಿಮೇಕ್ ಮಾಡುವುದಾಗಿ ನಿರ್ದೇಶಕ ಇಂದ್ರಕುಮಾರ್ ಘೋಷಿಸಿದ್ದಾರೆ. ಮಾಧುರಿ– ಅಮೀರ್ ಖಾನ್ ಅಭಿನಯದ 'ದಿಲ್' ಚಿತ್ರದ ಹಾಡುಗಳೂ ಆಗ ಸೂಪರ್‌ಹಿಟ್ ಆಗಿದ್ದವು. ಹೊಸ 'ದಿಲ್'ನಲ್ಲಿ ನಾಯಕ– ನಾಯಕಿ ಯಾರಾಗಬೇಕು ಎನ್ನುವ ಬಗ್ಗೆ ಚರ್ಚೆ ನಡೆದಿದೆಯಂತೆ. ಹಿಂದಿಯಲ್ಲಿ ಹೀಗೆ ಸೂಪರ್‌ಹಿಟ್ ಆದ ಸಿನಿಮಾಗಳನ್ನು ರಿಮೇಕ್ ಮಾಡುವುದು ಹೊಸತಲ್ಲ. 'ಆಶಿಕಿ', 'ಅಗ್ನಿಪಥ್', 'ಡಾನ್' ಮುಂತಾದ ಸಿನಿಮಾಗಳ ರಿಮೇಕ್ ಕೂಡಾ ಯಶಸ್ವಿಯಾಗಿದ್ದವು. ಈಗ 'ದಿಲ್' ಕೂಡಾ ರಿಮೇಕ್ ಆದರೆ ಯಶಸ್ಸು ಪಡೆಯುವುದರಲ್ಲಿ ಸಂಶಯವಿಲ್ಲ. 'ಆದರೆ ಮಾಧುರಿಯ ನಟನೆಯನ್ನು ಸರಿಗಟ್ಟುವುದು ಹೊಸ ಹೀರೊಯಿನ್‌ಗೆ ಸವಾಲೇ ಸರಿ' ಎಂದಿದ್ದಾರೆ ಇಂದ್ರಕುಮಾರ್.

■ ಹನಿ